**All India Radio: Bangalore**
**National Bulletin In Kannada**
**04.11.2025 1.10 p.m.**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

1. ಚುನಾವಣಾ ಆಯೋಗದಿಂದ ಬಿಹಾರದಲ್ಲಿ ಇಂದಿನಿಂದ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆಯ ಎರಡನೇ ಸುತ್ತು ಆರಂಭ
2. ಕತಾರ್ ನಲ್ಲಿ ನಡೆಯಲಿರುವ ವಿಶ್ವ ಸಾಮಾಜಿಕ ಅಭಿವೃದ್ಧಿ ಶೃಂಗಸಭೆಯಲ್ಲಿ ಭಾಗವಹಿಸಲಿರುವ ಸಚಿವ ಡಾ.ಮನ್ಸುಖ್ ಮಾಂಡವೀಯ
3. ೨೦೪೭ರ ವೇಳೆಗೆ ಭಾರತ ೫೦೦ ಮಿಲಿಯನ್ ಟನ್ ಉಕ್ಕಿನ ಸಾಮರ್ಥ್ಯ ಹೊಂದಲಿದೆ - ಉಕ್ಕು ಸಚಿವಾಲಯ
4. ಛತ್ತೀಸ್‌ಗಡದಿಂದ ಕೋಸ್ಟಾರಿಕಾಗೆ ೧೨ ಮೆಟ್ರಿಕ್ ಟನ್ ಬಲವರ್ಧಿತ ಅಕ್ಕಿ ರಫ್ತು

<><><><>

ಭಾರತೀಯ ಚುನಾವಣಾ ಆಯೋಗವು ಇಂದು ಮತದಾರರ ಪಟ್ಟಿಯ ತನ್ನ ವಿಶೇಷ ತೀವ್ರ ಪರಿಷ್ಕರಣಾ ಕಾರ್ಯದ ಎರಡನೇ ಸುತ್ತನ್ನು ಪ್ರಾರಂಭಿಸಿದೆ, ಇದು ಒಂಬತ್ತು ರಾಜ್ಯಗಳು ಮತ್ತು ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿ ಸುಮಾರು ೫೧ ಕೋಟಿ ಮತದಾರರನ್ನು ಒಳಗೊಂಡಿದೆ. ವಿಶೇಷ ತೀವ್ರ ಪರಿಷ್ಕರಣೆ ಡಿಸೆಂಬರ್ ೪ ರವರೆಗೆ ಮುಂದುವರಿಯುತ್ತದೆ ಮತ್ತು ಕರಡು ಮತದಾರರ ಪಟ್ಟಿಯನ್ನು ಡಿಸೆಂಬರ್ ೯ ರಂದು ಬಿಡುಗಡೆ ಮಾಡಲಾಗುತ್ತದೆ, ಮುಂದಿನ ವರ್ಷದ ಫೆಬ್ರವರಿ ೭ರಂದು ಅಂತಿಮ ಪ್ರಕಟಣೆ ಮಾಡಲಾಗುತ್ತದೆ. ಇದು ಸ್ವಾತಂತ್ರ್ಯದ ನಂತರ ಒಂಬತ್ತನೇ ಪರಿಷ್ಕರಣೆಯಾಗಿದ್ದು, ಕೊನೆಯ ಪರಿಷ್ಕರಣೆ ೨೦೦೨ ಮತ್ತು ೨೦೦೪ ರ ನಡುವೆ ನಡೆದಿದೆ. ಹೊಸ ಹಂತದಲ್ಲಿ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ಲಕ್ಷದ್ವೀಪ, ಛತ್ತೀಸ್‌ಗಢ, ಗೋವಾ, ಗುಜರಾತ್, ಕೇರಳ, ಮಧ್ಯಪ್ರದೇಶ, ಪುದುಚೇರಿ, ರಾಜಸ್ಥಾನ, ತಮಿಳುನಾಡು, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳ ಸೇರಿವೆ.

<><><><>

ಕಾರ್ಮಿಕ ಮತ್ತು ಉದ್ಯೋಗ ಹಾಗೂ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವ ಡಾ. ಮನ್ಸುಖ್ ಮಾಂಡವಿಯ ಅವರು ೨೦೨೫ ರ ನವೆಂಬರ್ ೪ ರಿಂದ ೬ ರವರೆಗೆ ಕತಾರ್ ರಾಜ್ಯವು ಆಯೋಜಿಸಿರುವ ಎರಡನೇ ವಿಶ್ವ ಸಾಮಾಜಿಕ ಅಭಿವೃದ್ಧಿ ಶೃಂಗಸಭೆಯಲ್ಲಿ ಭಾಗವಹಿಸಲು ದೋಹಾಕ್ಕೆ ಆಗಮಿಸಿದ್ದಾರೆ. ತಮ್ಮ ಭೇಟಿಯ ಸಮಯದಲ್ಲಿ, ಡಾ. ಮಾಂಡವಿಯ ಅವರು ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲಿದ್ದು, ಭಾರತದ ರಾಷ್ಟ್ರೀಯ ಹೇಳಿಕೆಯನ್ನು ನೀಡಲಿದ್ದಾರೆ. ಅವರು, ದೋಹಾ ರಾಜಕೀಯ ಘೋಷಣೆಯನ್ನು ಅಂಗೀಕರಿಸುವಲ್ಲಿ ವಿಶ್ವ ನಾಯಕರೊಂದಿಗೆ ಸೇರಲಿದ್ದಾರೆ. ನವೆಂಬರ್ ೫ ರಂದು, ಡಾ. ಮಾಂಡವಿಯಾ ಅವರು ನೀತಿ ಆಯೋಗ ಆಯೋಜಿಸಿರುವ "ಬಡತನ ನಿರ್ಮೂಲನೆ ಮಾರ್ಗಗಳು: ಕೊನೆಯ ಮೈಲಿಯನ್ನು ಸಬಲೀಕರಣಗೊಳಿಸುವಲ್ಲಿ ಭಾರತದ ಅನುಭವ" ಎಂಬ ಉಪ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಅವರು ಸಾಮಾಜಿಕ ನ್ಯಾಯಕ್ಕಾಗಿ ಜಾಗತಿಕ ಒಕ್ಕೂಟದ ಕುರಿತು ಐಎಲ್‌ಒ ಪ್ರಾಯೋಜಿತ ಸಚಿವರ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ, ಶೃಂಗಸಭೆಯ ಜೊತೆಗೆ, ಡಾ. ಮಾಂಡವಿಯಾ ಅವರು ಕತಾರ್, ರೊಮೇನಿಯಾ, ಮಾರಿಷಸ್ ಮತ್ತು ಯುರೋಪಿಯನ್ ಒಕ್ಕೂಟದ ಸಹವರ್ತಿಗಳೊಂದಿಗೆ ಹಾಗೂ ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಮಹಾನಿರ್ದೇಶಕರು ಮತ್ತು ವಿಶ್ವಸಂಸ್ಥೆಯ ಹಿರಿಯ ಅಧಿಕಾರಿಗಳೊಂದಿಗೆ ದ್ವಿಪಕ್ಷೀಯ ಸಭೆಗಳನ್ನು ನಡೆಸಲಿದ್ದಾರೆ.

<><><><>

ಭಾರತವು ೨೦೩೦ ರ ವೇಳೆಗೆ ೩೦೦ ಮಿಲಿಯನ್ ಟನ್ ಮತ್ತು ೨೦೪೭ ರ ವೇಳೆಗೆ ೫೦೦ ಮಿಲಿಯನ್ ಟನ್ ಉಕ್ಕಿನ ಸಾಮರ್ಥ್ಯವನ್ನು ಸಾಧಿಸುವ ಗುರಿಯನ್ನು ಹೊಂದಿದೆ ಎಂದು ಸರ್ಕಾರ ಇಂದು ಹೇಳಿದೆ. ನವದೆಹಲಿಯಲ್ಲಿ

ಇಂದು ನಡೆದ ಸಿಐಐ ಸ್ಟೀಲ್ ಶೃಂಗಸಭೆ ೨೦೨೫ ರ ಉದ್ಘಾಟನಾ ಅಧಿವೇಶನವನ್ನುದ್ದೇಶಿಸಿ ಮಾತನಾಡಿದ ಉಕ್ಕು ಸಚಿವಾಲಯದ ಕಾರ್ಯದರ್ಶಿ ಸಂದೀಪ್ ಪೌಂಡ್ರಿಕ್ ಈ ವಿಷಯ ತಿಳಿಸಿದರು. ಉಕ್ಕು ಉದ್ಯಮವನ್ನು ರಾಷ್ಟ್ರೀಯ ಆರ್ಥಿಕತೆಯ ಬೆನ್ನೆಲುಬು ಮತ್ತು ವಿಕಸಿತ ಭಾರತದ ದೃಷ್ಟಿಕೋನವನ್ನು ಸಾಕಾರಗೊಳಿಸುವಲ್ಲಿ ಪ್ರಮುಖ ಸಹಾಯಕ ಎಂದು ಅವರು ಕರೆದರು. ಬಲವಾದ ಮೂಲಸೌಕರ್ಯ ಬೆಳವಣಿಗೆ ಮತ್ತು ಹೆಚ್ಚುತ್ತಿರುವ ದೇಶೀಯ ಬೇಡಿಕೆಯಿಂದ ಬೆಂಬಲಿತವಾದ ಭಾರತದ ಉಕ್ಕಿನ ಸಾಮರ್ಥ್ಯವು ಒಂದು ದಶಕದ ಹಿಂದೆ ಸುಮಾರು ೧೦೦ ಮಿಲಿಯನ್ ಟನ್‌ಗಳಿಂದ ಈಗ ೨೦೦ ಮಿಲಿಯನ್ ಟನ್‌ಗಳಿಗೆ ಹತ್ತಿರದಲ್ಲಿದೆ ಎಂದ ಅವರು, ಈ ವರ್ಷದ ಮೊದಲಾರ್ಧದಲ್ಲಿ ಈ ವಲಯವು ಶೇಕಡಾ ೮.೫ ರಷ್ಟು ಬೆಳವಣಿಗೆಯನ್ನು ದಾಖಲಿಸಿದೆ, ೨೦೨೪-೨೫ ರಲ್ಲಿ ಬೇಡಿಕೆ ೧೫೨ ಮಿಲಿಯನ್ ಟನ್‌ಗಳನ್ನು ತಲುಪಿದೆ ಎಂದು ಅವರು ಹೇಳಿದರು.

<><><><>

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಅಧೀನದಲ್ಲಿರುವ ಕೃಷಿ ಮತ್ತು ಸಂಸ್ಕರಿಸಿದ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ, ಛತ್ತೀಸ್‌ಗಢದಿಂದ ಕೋಸ್ಟಾರಿಕಾಗೆ ೧೨ ಮೆಟ್ರಿಕ್ ಟನ್ ಬಲವರ್ಧಿತ ಅಕ್ಕಿ ಕಾಳುಗಳ ಮೊದಲ ರಫ್ತು ಸಾಗಣೆಗೆ ಅನುಕೂಲ ಮಾಡಿಕೊಟ್ಟಿದೆ. ಪೋಷನ್ ಅಭಿಯಾನದ ಅಡಿಯಲ್ಲಿ ಜಾರಿಗೆ ತರಲಾಗುತ್ತಿರುವ ಸರ್ಕಾರದ ಅಪೌಷ್ಟಿಕತೆ ಮುಕ್ತ ಭಾರತ ಯೋಜನೆಗೆ ಅನುಗುಣವಾಗಿ ಈ ಉಪಕ್ರಮವನ್ನು ಕೈಗೊಳ್ಳಲಾಗಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ತಿಳಿಸಿದೆ. ಛತ್ತೀಸ್‌ಗಢವು ಅಕ್ಕಿ ಮತ್ತು ಬಲವರ್ಧಿತ ಅಕ್ಕಿ ಉತ್ಪನ್ನಗಳ ರಫ್ತನ್ನು ಉತ್ತೇಜಿಸಲು ನಿರಂತರ ಪ್ರಯತ್ನಗಳನ್ನು ಮಾಡಿದೆ ಎಂದು ಸಚಿವಾಲಯ ತಿಳಿಸಿದೆ. ಈ ಕ್ರಮವು ರಾಜ್ಯದ ರೈತರು, ಗಿರಣಿದಾರರು ಮತ್ತು ರಫ್ತುದಾರರು ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಮನ್ನಣೆ ಪಡೆಯಲು ಅನುವು ಮಾಡಿಕೊಡುತ್ತದೆ ಎಂದು ಅದು ಹೇಳಿದೆ.

<><><><>

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಉತ್ತರಾಖಂಡಕ್ಕೆ ಭೇಟಿ ನೀಡಿದ ಮೂರನೇ ದಿನವಾದ ಇಂದು ನೈನಿತಾಲ್‌ನಲ್ಲಿರುವ ಕುಮಾವೂನ್ ವಿಶ್ವವಿದ್ಯಾಲಯದ ೨೦ ನೇ ಘಟಿಕೋತ್ಸವದಲ್ಲಿ ಭಾಗವಹಿಸಿ, ಸಮಾರಂಭದಲ್ಲಿ, ಪದವಿ ಮತ್ತು ಸ್ನಾತಕೋತ್ತರ ಹಂತದ ವಿದ್ಯಾರ್ಥಿಗಳಿಗೆ ಪದಕಗಳನ್ನು ಪ್ರದಾನ ಮಾಡಿದರು. ಇದಕ್ಕೂ ಮೊದಲು ರಾಷ್ಟ್ರಪತಿ ನೈನಿತಾಲ್‌ನಲ್ಲಿರುವ ನೀಮ್ ಕರೋಲಿ ಬಾಬಾ ಅವರ ಆಶ್ರಮವಾದ ಕೈಂಚಿ ಧಾಮಕ್ಕೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದರು.  ನಿನ್ನೆ ಅವರು, ನೈನಿತಾಲ್‌ನಲ್ಲಿ ರಾಜಭವನ ಸ್ಥಾಪನೆಯಾಗಿ ೧೨೫ ವರ್ಷಗಳು ಪೂರ್ಣಗೊಂಡಿರುವ ಕುರಿತ ಸಮಾರಂಭದಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ, ರಾಷ್ಟ್ರಪತಿ ಮುರ್ಮು ಅವರು ರಾಷ್ಟ್ರಪತಿ ಭವನವು ಸ್ವತಂತ್ರ ಭಾರತದಲ್ಲಿ ಗಣರಾಜ್ಯದ ಸಂಕೇತವಾಗಿರುವಂತೆಯೇ, ರಾಜ್ಯಗಳಲ್ಲಿ ರಾಜಭವನಗಳು ಪ್ರಜಾಪ್ರಭುತ್ವ ವ್ಯವಸ್ಥೆಯ ಸಂಕೇತಗಳಾಗಿವೆ ಎಂದು ಹೇಳಿದರು. ಅದರ ರಚನೆಯ ನಂತರ, ಉತ್ತರಾಖಂಡವು ನಿರಂತರವಾಗಿ ಪ್ರಗತಿ ಮತ್ತು ಸಮೃದ್ಧಿಯ ಹಾದಿಯಲ್ಲಿ ಮುಂದುವರಿಯುತ್ತಿದೆ ಎಂದು ಅವರು ಹೇಳಿದರು, ರಾಜ್ಯವು ಅಭಿವೃದ್ಧಿಯ ಹೊಸ ಎತ್ತರವನ್ನು ತಲುಪುವುದನ್ನು ಮುಂದುವರಿಸುತ್ತದೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದರು.

<><><><>

ಗುರುನಾನಕ್ ದೇವ್ ಜಯಂತಿಯ ಅಂಗವಾಗಿ, ಬಾಂಬೆ ?ರು ವಿನಿಮಯ ಕೇಂದ್ರ ಮತ್ತು ರಾಷ್ಟ್ರೀಯ ಷೇರು ವಿನಿಮಯ ಕೇಂದ್ರ ನಾಳೆ ಮುಚ್ಚಿರುತ್ತದೆ. ನಾಳೆ ಸಿಖ್ ಆಧ್ಯಾತ್ಮಿಕ ನಾಯಕ ಮತ್ತು ಸಿಖ್ ಧರ್ಮದ ಸಂಸ್ಥಾಪಕರ ಜನ್ಮ ದಿನಾಚರಣೆಯಾಗಿದ್ದು, ಷೇರುಗಳು, ಷೇರು ಉತ್ಪನ್ನಗಳು ಮತ್ತು ಕರೆನ್ಸಿ ಉತ್ಪನ್ನಗಳು ಸೇರಿದಂತೆ ಮಾರುಕಟ್ಟೆ ವಿಭಾಗಗಳಲ್ಲಿ ವ್ಯಾಪಾರ ಚಟುವಟಿಕೆಗಳು ಸ್ಥಗಿತಗೊಳ್ಳುತ್ತವೆ. ಸಾಮಾನ್ಯ ಮಾರುಕಟ್ಟೆ ಕಾರ್ಯಾಚರಣೆಗಳು ನವೆಂಬರ್ ೬ ರಂದು ಪುನರಾರಂಭಗೊಳ್ಳುತ್ತವೆ.

<><><><>

ಉದಯೋನ್ಮುಖ ವಿಜ್ಞಾನ ತಂತ್ರಜ್ಞಾನ ನಾವೀನ್ಯತೆ ಸಮಾವೇಶ, ಎಸ್ಟಿಕ್ ೨೦೨೫, ಭಾರತದ ದೊಡ್ಡ ಡೀಪ್-ಟೆಕ್ ಲೀಪ್‌ನಿಂದ ಗುರುತಿಸಲ್ಪಟ್ಟಿದೆ ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಹೇಳಿದ್ದಾರೆ. ಎಸ್ಟಿಕ್ ೨೦೨೫ ಕಳೆದ ನವೆಂಬರ್ ೩ ರಿಂದ ೫ ರವರೆಗೆ ನವದೆಹಲಿಯ ಭಾರತ್ ಮಂಟಪದಲ್ಲಿ ನಡೆಯುತ್ತಿದ್ದು, ಇದು ನೊಬೆಲ್ ಪ್ರಶಸ್ತಿ ವಿಜೇತರು, ಪ್ರಖ್ಯಾತ ವಿಜ್ಞಾನಿಗಳು, ನಾವೀನ್ಯಕಾರರು ಮತ್ತು ನೀತಿ ನಿರೂಪಕರೊಂದಿಗೆ ಶೈಕ್ಷಣಿಕ, ಸಂಶೋಧನಾ ಸಂಸ್ಥೆಗಳು, ಕೈಗಾರಿಕೆ ಮತ್ತು ಸರ್ಕಾರದಿಂದ ೩ ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳನ್ನು ಒಟ್ಟುಗೂಡಿಸುತ್ತದೆ.

<><><>

ವಾಣಿಜ್ಯ ಮತ್ತು ಕೈಗಾರಿಕಾ ರಾಜ್ಯ ಸಚಿವ ಜಿತಿನ್ ಪ್ರಸಾದ ಅವರು ಇಂದು ಬುಚಾರೆಸ್ಟ್‌ನಲ್ಲಿ ರೊಮೇನಿಯಾದ ಸಚಿವೆ ಓನಾ-ಸಿಲ್ವಿಯಾ ಟೋಯಿಯು ಅವರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಿದರು. ಈ ಸಭೆಯಲ್ಲಿ ನಡೆದ ಚರ್ಚೆಗಳು ವ್ಯಾಪಾರವನ್ನು ವಿಸ್ತರಿಸುವುದು, ಹೂಡಿಕೆಯನ್ನು ಆಕರ್ಷಿಸುವುದು ಮತ್ತು ವಿಶಾಲವಾದ ಭಾರತ-ಯುರೋಪಿಯನ್ ಒಕ್ಕೂಟದ ಆರ್ಥಿಕ ಚೌಕಟ್ಟಿನೊಳಗೆ ಸ್ಥಿತಿಸ್ಥಾಪಕ ಪೂರೈಕೆ ಸರಪಳಿಗಳನ್ನು ಬಲಪಡಿಸುವತ್ತ ಗಮನಹರಿಸಿದವು ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ತಿಳಿಸಿದೆ. ಈ ವರ್ಷದೊಳಗೆ ನ್ಯಾಯಯುತ, ಸಮತೋಲಿತ ಮತ್ತು ಪರಸ್ಪರ ಪ್ರಯೋಜನಕಾರಿ ಭಾರತ-ಯುರೋಮೇನಿಯಾ ಮುಕ್ತ ವ್ಯಾಪಾರ ಒಪ್ಪಂದ ಮುಕ್ತಾಯದತ್ತ ಕೆಲಸ ಮಾಡಲು ಉಭಯ ದೇಶಗಳು ಒಪ್ಪಿಕೊಂಡಿವೆ. ಪೆಟ್ರೋಲಿಯಂ ಉತ್ಪನ್ನಗಳು, ಎಂಜಿನಿಯರಿಂಗ್ ಸರಕುಗಳು, ಔಷಧಗಳು ಮತ್ತು ಸೆರಾಮಿಕ್ಸ್‌ನಂತಹ ಆದ್ಯತೆಯ ವಲಯಗಳಲ್ಲಿ ಪೂರೈಕೆ-ಸರಪಳಿ ಸಂಪರ್ಕಗಳು ಮಾರುಕಟ್ಟೆ ಪ್ರವೇಶಗಳನ್ನು ಹೆಚ್ಚಿಸಲು, ಪಾಲುದಾರಿಕೆಗಳಲ್ಲಿ ಸಹಯೋಗವನ್ನು ಸುಗಮಗೊಳಿಸಲು ಉಭಯ ದೇಶಗಳು ಒಮ್ಮತಕ್ಕೆ ಬಂದಿವೆ.

<><><>

ಭಾನುವಾರ ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೋದಿಂದ ದೆಹಲಿಗೆ ಹೊರಟಿದ್ದ ಏರ್ ಇಂಡಿಯಾದ ಎಐ೧೭೪ ವಿಮಾನವನ್ನು ಶಂಕಿತ ತಾಂತ್ರಿಕ ದೋಷದಿಂದಾಗಿ ಮಂಗೋಲಿಯಾದ ಉಲಾನ್‌ಬತಾರ್‌ನಲ್ಲಿ ಮುನ್ನೆಚ್ಚರಿಕೆಯಾಗಿ ಇಳಿಸಲಾಯಿತು. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ವಿಮಾನವು ಉಲಾನ್‌ಬತಾರ್‌ನಲ್ಲಿ ಸುರಕ್ಷಿತವಾಗಿ ಇಳಿಯಿತು ಮತ್ತು ಅಗತ್ಯ ಪರಿಶೀಲನೆಗಳಿಗೆ ಒಳಗಾಗುತ್ತಿದೆ ಎಂದು ಏರ್ ಇಂಡಿಯಾ ತಿಳಿಸಿದೆ. ತೊಂದರೆಗೊಳಗಾದ ಪ್ರಯಾಣಿಕರಿಗೆ ಸಹಾಯ ಮತ್ತು ಸಾಧ್ಯವಾದಷ್ಟು ಬೇಗ ಅವರನ್ನು ಅವರ ಗಮ್ಯಸ್ಥಾನಕ್ಕೆ ತಲುಪಿಸಲು ತನ್ನ ಪಾಲುದಾರರೊಂದಿಗೆ ನಿಕಟವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ವಿಮಾನಯಾನ ಸಂಸ್ಥೆಗಳು ತಿಳಿಸಿವೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>